ನಡೆದರು. ಮನದೊಳಗೆ ನೂರು ಬೇಗೆ ಇದ್ದರೂ ಎಲ್ಲವನ್ನು ಮರೆತಂತೆ ಅಣ್ಣನೊಂದಿಗೆ ಮಾತಾಡ್ತಾ, ‘ಈ ಸಲ ಕೊಬ್ರಿಗೆ ವೊಳ್ಳೆ ಧಾರಣೆ ಐತೇ ಕಣಣ್ಣ. ಪಕ್ಕದೂರೋರು ಯಾರೋ ತ್ವಾಟಾ ಮಾರೋಕೆ ವೊಂಟವ್ರೆ, ಎಂಗೂ ಕೊಬ್ರಿ ಅಣ ಬತ್ತದಲ್ಲ, ನಾವೇ ಕೊಂಡ್ಕೊಳನಾ’ ಎಂದಾಗ ಮಾತು ವ್ಯವಹಾರದತ್ತ ತಿರುಗಿತು.

‘ಆತು, ತಗೋಳನಾ ಬುಡು, ಒಂದು ಆಸ್ತಿಯಾಗಿ ಉಳಿತೈತೆ. ಯಾರು ಎತ್ತ ಅಂತ ಅಲ್ಗೇ ವೋಗಿ ನೋಡ್ಕಂಡ್ಬರಾನ, ಇವತ್ತಾಗಕಿಲ್ಲ, ವೊತ್ತರಿಕೆ ಬ್ಯಾಗ ಎದ್ದು ವೊಂಡನಾ, ಮನೇಲು ಏಳ್ಬುಟ್ಟೇ ವೋಗನ, ನಾಳಿಕೆ ನಮ್ಮ ಕೇಳ್ಳಲ್ಲ ಅಂತ ಅಂದು ಬುಟ್ರೆ’ ಎಂದು ತಮ್ಮನ ಯಾವ ಮಾತೂ ಮೀರದ ಜಗದೀಶರು ತಮ್ಮ ಹೇಳಿದ್ದನ್ನು ಒಪ್ಪಿಕೊಂಡರು.

ಇತ್ತ ಮನ್ನಲ್ಲಿ ವಾರಿಜಳನ್ನು ಅವಳ ಪಾಡಿಗೆ ಅವಳು ಇದ್ದು ಬಿಡಲಿ ಅಂತ ಒಬ್ಬಳನ್ನೇ ಬಿಟ್ಟು ಎಲ್ಲರನ್ನೂ ತಮ್ಮ ಮನೆಗೆ ಕರೆದುಕೊಂಡು ಬಂದ ಶಾಂಭವಿ, ವೀರುವನ್ನು ಎತ್ತಿಕೊಂಡೇ ಬಂದಳು. ಅವನ ಸ್ಥಿತಿ ಅವಳಿಗೆ ತುಂಬಾ ಅನುಕಂಪ ಹುಟ್ಟಿಸಿತ್ತು. ವೀರುವಿನ ಮೇಲೆ ಶಾಂಭವಿಗೆ ಮೊದಲಿನಿಂದಲೂ ಪ್ರೀತಿಯಿತ್ತು. ಆದರೆ ತಮ್ಮ ಗಂಡ ಅವನನ್ನು ಅತಿಯಾಗಿ ಹಚ್ಚಿಕೊಂಡಿರುವುದು ಅವಳಲ್ಲಿ ಕೊಂಚ ಇರಿಸುಮುರಿಸು ತರುತ್ತಿತ್ತು. ಜೊತೆಗೆ ವಾರಿಜ ತನಗೆ ಯಾರಿಗೂ ಆಗದ ಕುಲಪುತ್ರ ಹುಟ್ಟಿಬಿಟ್ಟಿದ್ದಾನೆ ಅಂತ ಆಡುವ ರೀತಿಗೆ ಜುಗುಪ್ಸೆ ತರಿಸಿ ವೀರೇಶನನ್ನು ಹಚ್ಚಿಕೊಳ್ಳದೆ, ಅವನ ಮೇಲಿದ್ದ ಪ್ರೀತಿಯನ್ನು ಮುಚ್ಚಿಟ್ಟುಕೊಂಡು ಆದಷ್ಟು ದೂರವಿದ್ದುಬಿಡುತ್ತಿದ್ದಳು. ಈಗ ಮನೆಯೂ ಬೇರೆಯಾಗಿದೆ, ವಾರಿಜಳೂ ಬೇರೆ ಇದ್ದಾಳೆ... ಆದರೆ ವೀರೂ ಮಾತ್ರ ಆ ಮನೆ ಈ ಮನೆ ಅಂತ ವ್ಯತ್ಯಾಸ ತಿಳಿಯದೆ ಎರಡೂ ಮನೆಯಲ್ಲಿ ಓಡಾಡಿಕೊಂಡು, ಇಲ್ಲಿ ಬಂದರೆ ದೊಡ್ಡಮ್ಮ ದೊಡ್ಡಮ್ಮ ಅಂತ ಹಿಂದೆಮುಂದೆ ಸುತ್ತುತ್ತಾ ಮನೆಯ ಮಗನೇ ಆಗಿಬಿಟ್ಟಿದ್ದಾನೆ. ಈಗಂತೂ ಯಾರಿಗೋ ಹೆದರಿ ವೀರೂ ಮೇಲಿನ ಪ್ರೀತಿಯನ್ನು ಮುಚ್ಚಿಟ್ಟುಕೊಳ್ಳುವಂತಿಲ್ಲ? ವೀರೂವಿಗೂ ಮೊದಲಿನಿಂದಲೂ ದೊಡ್ಡಮ್ಮನ ಮೇಲೆ ತುಂಬಾ ಪ್ರೀತಿ, ಜೊತೆಗೆ ಅಕ್ಕಂದಿರ ಮೇಲೂ ಅಷ್ಟೇ ಪ್ರೀತಿ.

(ಸಶೇಷ)

## ಪ್ರತಿಕ್ರಿಯೆ




### ರೋಚಕ ಕಥಾನಕ

‘ಆಪರೇಷನ್ ಅಮ್ಮು’ ಧಾರಾವಾಹಿ (ಮೋಹನ್ ಪ್ರಸಾದ್) ತುಂಬ ಚೆನ್ನಾಗಿ ಮೂಡಿಬಂದಿದೆ. ಒಂದು ಕೊಲೆಯ ಸುತ್ತ ನಡೆಯುವ ಕಥಾವಸ್ತುವನ್ನು ಒಳಗೊಂಡ ಕಥೆ ಕೊನೆಯವರೆಗೂ ಕುತೂಹಲ ಮೂಡಿಸಿತು. ಇನ್ಸ್‌ಪೆಕ್ಟರ್ ಮಾಯಣ್ಣ ಹಾಗೂ ಮುರುಗನ್ ನಡುವೆ ನಡೆಯುವ ಘರ್ಷಣೆ ಸಿನಿಮಾ ಒಂದರ ಹೊಡೆದಾಟದ ದೃಶ್ಯವನ್ನು ನೆನಪಿಸಿತು. ರೋಚಕ ಅಂತ್ಯ ಇಷ್ಟ ಆಯಿತು.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ

### ಉತ್ತಮ ಪತ್ತೇದಾರಿ ಕಥನ

ಧಾರಾವಾಹಿ ಕುತೂಹಲಭರಿತ. ಅಂತ್ಯದವರೆಗೂ ಕೊಲೆಗಾರ ಯಾರೆಂಬುದರ ರಹಸ್ಯವನ್ನು ಕಾಪಾಡಿದ್ದು, ಕೊಲೆಗಾರನ ಜಾಡನ್ನು ಕಂಡುಹಿಡಿಯುವ ವಿಧಾನ ಸೊಗಸಾಗಿತ್ತು. ಒಂದು ಉತ್ತಮ ಪತ್ತೇದಾರಿ ಧಾರಾವಾಹಿಯನ್ನು ಓದುಗರಿಗೆ ನೀಡಿದ ‘ಸುಧಾ’ಗೆ ಧನ್ಯವಾದಗಳು.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಏನು ‘ಮಾಯ’ವೋ...

ಧಾರಾವಾಹಿ, ಹನ್ನೆರಡು ವಾರ ಕುತೂಹಲದಿಂದ ಓದಿಸಿಕೊಂಡು ಹೋಯಿತು. ಇದು ಕಾದಂಬರಿಕಾರರ ಮೊದಲ ಪ್ರಯತ್ನವಾದರೂ, ಯಾವುದೇ ಕೊರತೆ ಇಲ್ಲದೆ ಪೊಲೀಸ್ ಇಲಾಖೆ, ಪತ್ತೇದಾರಿಕೆ ಮತ್ತು ತನಿಖೆ ವಿಧಾನಗಳ ಸಕಲ ವಿವರಗಳೊಂದಿಗೆ ಸಶಕ್ತವಾಗಿ ಮೂಡಿಬಂದಿದೆ. ಇದು ಒಂದು ಕೊಲೆಯ ಸುತ್ತ ಸಾಗುವ ರೋಚಕ ಕಥೆಯಾದ್ದರಿಂದ ಧಾರಾವಾಹಿಯ ಹೆಸರು ಅಷ್ಟೊಂದು ಹೊಂದಿಕೆಯಾಗಲಿಲ್ಲ. ಬುದ್ಧಿವಂತ ಇನ್ಸ್‌ಪೆಕ್ಟರ್ ಮಾಯಣ್ಣ ಕೆಲವು ಸಮಯದಲ್ಲಿ ಒಬ್ಬನೇ ತನಿಖೆಗೆ ಹೊರಟು ತೊಂದರೆಗೆ ಸಿಕ್ಕಿಹಾಕಿಕೊಳ್ಳುವುದು ಅಷ್ಟೊಂದು ತರ್ಕಬದ್ಧವಾಗಿಲ್ಲ. ಸಣ್ಣಪುಟ್ಟ ಕೊರತೆಗಳನ್ನು ಮೀರಿ ಧಾರಾವಾಹಿ ವಾರದಿಂದ ವಾರಕ್ಕೆ ಓದುಗರನ್ನು ಕುತೂಹಲದಲ್ಲಿ ಕಟ್ಟಿಹಾಕಿತು. ಮೋಹನ್ ಪ್ರಸಾದರ ಲೇಖನಿಯಿಂದ ಮತ್ತಷ್ಟು ಪತ್ತೇದಾರಿ ಕಾದಂಬರಿಗಳು ಮೂಡಿಬರಲಿ ಮತ್ತು ಓದುಗರನ್ನು ರಂಜಿಸಲಿ.

–ವಿದ್ಯಾಶಂಕರ ಹರಪನಹಳ್ಳಿ

### ಹೀರೊಗೆ ಅಭಿನಂದನೆ ಬೇಡವೇ?

ಪತ್ತೇದಾರಿ ಕಾದಂಬರಿಯನ್ನು ಬರೆಯುವ ಕಾದಂಬರಿಕಾರರ ಆಳವಾದ ಜ್ಞಾನಕ್ಕೆ ನಿಜವಾಗಿಯೂ ತಲೆದೂಗಬೇಕು. ಕಾದಂಬರಿಯನ್ನು ಓದುತ್ತಾ ಹೋದಂತೆ ನಿಗೂಢವಾದ ರಹಸ್ಯ ತಿಳಿಯುವಂತಹ ಕುತೂಹಲ ಎಲ್ಲಾ ಭಾಗಗಳಲ್ಲಿ ಮುಂದುವರೆಸಿಕೊಂಡು ಓದುವ ಹಂಬಲ ಹೆಚ್ಚಿಸುತ್ತಿತ್ತು. ಕೊನೆಯಲ್ಲಿ ಅಪರಾಧಿಗೆ ಶಿಕ್ಷೆ ಆಗುವಂತೆ ಮಾಡಿ, ಮಾಯಣ್ಣನವರಿಗೆ ಮೇಲಧಿಕಾರಿಗಳಿಂದ ಅಭಿನಂದನೆ ಸಲ್ಲಿಸುವ ಮೂಲಕ ಮುಗಿಸಬಹುದಾಗಿತ್ತು.

–ಪದ್ಮನಾಭ ಆರ್.

### ಪ್ರತೀವಾರ ಕಾಯುತ್ತಿದ್ದೆ

ಧಾರಾವಾಹಿ ತುಂಬ ಚೆನ್ನಾಗಿ ಮೂಡಿಬಂತು. ಮೋನಪ್ಪನವರ ಕಲೆ ಕೂಡ ಅದ್ಭುತ. ತನಿಖಾಧಿಕಾರಿ ಮಾಯಣ್ಣನವರ ಪತ್ತೇದಾರಿ ತಂತ್ರ, ಹಲವು ತಿರುವುಗಳು ಪ್ರತಿವಾರದ ‘ಸುಧಾ’ವನ್ನು ಕಾಯುವಂತೆ ಮಾಡುತಿತ್ತು.

–ಭಾರತೀ ಗಂಗಾಧರ್, ಬೆಂಗಳೂರು

### ಅಮ್ಮು ಬದುಕಬೇಕಿತ್ತು...

ಈ ಧಾರಾವಾಹಿಯನ್ನು ಮೊದಲನೇ ಕಂತಿನಿಂದ ಹಿಡಿದು ಕೊನೆಯವರೆಗೂ ಒಂದೂ ಬಿಡದೆ ಓದಿದ್ದೇನೆ. ತುಂಬಾ ಅದ್ಭುತವಾಗಿತ್ತು.

ಇನ್ಸ್‌ಪೆಕ್ಟರ್ ಮಾಯಣ್ಣನ ತನಿಖಾ ಸರಣಿ ತುಂಬಾ ರೋಮಾಂಚಕಾರಿಯಾಗಿತ್ತು. ಆದರೆ ಅಮ್ಮು ಬದುಕಬೇಕಿತ್ತು ಎಂಬ ಆಸೆ ಒಂದು ಕೊನೆಯಲ್ಲಿ ಉಳಿಯಿತು. ಎಲ್ಲಾ ಪಾತ್ರಗಳನ್ನು ತುಂಬಾ ಚೆನ್ನಾಗಿ ಸೃಷ್ಟಿಸಿದ್ದಾರೆ.

–ಪ್ರಿಯಾಂಕಾ

### ಸಿನಿಮಾ ಮಾಡಲು ಸೂಕ್ತ

ಅತ್ಯುತ್ತಮ ಪತ್ತೇದಾರಿ ಕಾದಂಬರಿ. ವಿಶೇಷವೆಂದರೆ ಇದರ ನಾಯಕ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಆಗಿರುವುದು. ನಮ್ಮ ಎಲ್ಲ ಪೊಲೀಸರೂ ಮಾಯಣ್ಣನಂತೆ ದಕ್ಷತೆಯಿಂದ ಕೆಲಸ ಮಾಡಿದರೆ ಎಷ್ಟು ಚಂದ ಅಲ್ಲವೇ. ಒಂದು ಒಳ್ಳೆಯ ಸಿನಿಮಾ ಮಾಡಲು ಸೂಕ್ತವಾಗಿದೆ.

–ಜಯಶಂಕರ್ ಆರ್.

### ಉತ್ತಮ ಅಂತ್ಯ

ಕಾದಂಬರಿ ಕುತೂಹಲಭರಿತವಾಗಿದೆ. ಓದುಗರ ಊಹೆಗೂ ಮೀರಿ ಕೊನೆಯವರೆಗೂ ರಹಸ್ಯ ಬಿಟ್ಟುಕೊಡದೆ ಅಂತ್ಯದಲ್ಲಿ ಸುಂದರ ಮುಕ್ತಾಯ ಕಂಡಿದ್ದು ನೋಡಿ ಖುಷಿಯಾಯ್ತು. ಇಂಥ ಕಾದಂಬರಿ ಇನ್ನಷ್ಟು ಪ್ರಕಟವಾಗಲಿ.

–ಕೊಹಿಮ, ಬಸರಕೋಡು

### ‘ಸುಧಾ’ದಿಂದ ಸಿಹಿಯೂಟ

ಪತ್ತೇದಾರಿ ಕಾದಂಬರಿಗಳನ್ನು ಅತಿಯಾಗಿ ಇಷ್ಟಪಡುವವರಿಗೆ 12 ವಾರ ಸುಧಾ ಸಿಹಿಯೂಟ ಬಡಿಸಿದಂತಾಗಿದೆ. ಎಷ್ಟು ಸೊಗಸಾಗಿ, ಸಲೀಸಾಗಿ, ಬಿರುಸಾಗಿ, ಅಚ್ಚುಕಟ್ಟಾಗಿ ಬಂದ ಕಥೆ ರಭಸದಿಂದ ಓದಿಸಿಕೊಂಡು ಹೋಯಿತು. ಎಂದಿನಂತೆ ಮೋನಪ್ಪ ಅವರ ಕುಂಚ ತನ್ನ ಪ್ರತಿಭೆ ಅನಾವರಣಗೊಳಿಸಿದೆ.

–ಕೆ.ಎಂ. ಮಧ್ವರಾಯ, ಬೆಂಗಳೂರು